ವಿಷಯ: ರಾಜ್ಯದಲ್ಲಿ ವಯಸ್ಕರ ಶಿಕ್ಷಣ.

234 (1422)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ವೃತ್ತಿ ಶಿಕ್ಷಣ ಮತ್ತು ಸರ್ಕಾರಿ ಮುದ್ರಣಾಲಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಜನ ಮಹಿಳೆಯರು ಮತ್ತು ಪುರುಷರಿಗೆ ವಯಸ್ಕರ ಶಿಕ್ಷಣವನ್ನು ನೀಡಲಾಗಿದೆ?

ಆ) 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಎ.ಕೃಷ್ಣಪ್ಪ (ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ವೃತ್ತಿ ಶಿಕ್ಷಣ ಮತ್ತು ಸರ್ಕಾರಿ ಮುದ್ರಣಾಲಯ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ 5.87 ಲಕ್ಷ ಮಹಿಳೆಯರಿಗೆ ಮತ್ತು 4.78 ಲಕ್ಷ ಪುರುಷರಿಗೆ ಶಿಕ್ಷಣವನ್ನು ನೀಡಲಾಗಿದೆ.

ಇದಲ್ಲದೆ, ಒಂದನೇ ಹಂತದ ಸಾಕ್ಷರತಾ ಆಂದೋಲನದಲ್ಲಿ ಸಾಕ್ಷರಸ್ಥರಾಗದೆ ಬಾಕಿ ಉಳಿದವರಿಗಾಗಿ ''ಕನ್ನಡ ನಾಡು ಸಾಕ್ಷರ ನಾಡು'' ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ. ''ಕನ್ನಡ ನಾಡು ಸಾಕ್ಷರ ನಾಡು'' ಕಾರ್ಯಕ್ರಮದ ಗುರಿ ರೂ.25.00 ಲಕ್ಷವಾಗಿದ್ದು, ಈಗ ಕಲಿಕೆ ನಡೆಯುತ್ತಿದೆ. ಇದರ ಮೌಲ್ಯಮಾಪನ ಮೇ, ಜೂನ್ ತಿಂಗಳಲ್ಲಿ ನಡೆಯುತ್ತದೆ.

ಆ)	1995-96	ರೂ. 145.00 ಲಕ್ಷಗಳು
	1996-97	ರೂ. 75.56 ಲಕ್ಷಗಳು
	1997-98	ರೂ. 55.00 ಲಕ್ಷಗಳು
	ಒಟ್ಟು	ರೂ. 275.56 ಲಕ್ಷಗಳು

ಇದಲ್ಲದೆ, ಕನ್ನಡ ನಾಡು - ಸಾಕ್ಷರ ನಾಡು ಸಾಕ್ಷರತಾ ಆಂದೋಲನಕ್ಕೆ ರೂ.635.00 ಲಕ್ಷ ಅನುದಾನ ನಿಗದಿಯಾಗಿದ್ದು ಇದನ್ನು ಸಾಕ್ಷರತಾ ಆಂದೋಲನಕ್ಕೆ ಈಗಾಗಲೇ ಬಿಡುಗಡೆ ಆಗಿ ಉಳಿದ ಅನುದಾನದಿಂದ ಭರಿಸಲಾಗುತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ವಯಸ್ಕರ ಶಿಕ್ಷಣ ಪ್ರಾರಂಭವಾಗಿ ಸುಮಾರು ನಲವತ್ತಾರು ವರ್ಷಗಳಾದವು. ತಮ್ಮ ಮುಂದಿನ ಗುರಿ ಏನು? ಎಷ್ಟು ವರ್ಷದಲ್ಲಿ ಈ ರಾಜ್ಯವನ್ನು ಸಂಪೂರ್ಣ ಅನಕ್ಷರಸ್ಥರಿಲ್ಲದ ರಾಜ್ಯವನ್ನಾಗಿ ಮಾಡುತ್ತೀರಿ? ಈ ಬಗ್ಗೆ ತಮ್ಮ ಕಾರ್ಯಕ್ರಮವೇನು? ತಮಗೆ ಗೊತ್ತಿರುವ ಹಾಗೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಪಿ.ಯು.ಸಿ, ಡಿಗ್ರಿ ಮಾಡಿಕೊಂಡಿರುವ ಯುವಕರು ಸಾಕ್ಷರತೆಯನ್ನು ಕಲಿಸುವಂತಹ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಏನಾದರೂ ಪ್ರೋತ್ಸಾಹಧನವನ್ನು ಕೊಡಬೇಕೆಂದು ತಮಗೆ ಅನ್ನಿಸುವುದಿಲ್ಲವೆ? ಇದರ ಬಗ್ಗೆ ತಾವು ಏನಾದರೂ ಯೋಚಿಸಿದ್ದೀರಾ? ನೀವು ಮಹಾಭಾರತ, ರಾಮಾಯಣ, ಹೀಗೆ ಕೆಲವು ಪುಸ್ತಕಗಳನ್ನು ಪ್ರಕಟಿಸಿದ್ದೀರಿ, ಇವು ಗೋದಾಮ್‌ಗಳಲ್ಲಿ ಹಾಗೆ ಕೊಳೆಯುತ್ತಿವೆ, ಈ ಪುಸ್ತಕಗಳ ಪ್ರಿಂಟಿಂಗ್ ಮಾಡಿರುವ ಬಗ್ಗೆ ಅನೇಕ ಅವ್ಯವಹಾರಗಳು ನಡೆದಿರುವುದು ಬೆಳಕಿಗೆ ಬಂದಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್.ಕೃಷ್ಣಪ್ಪ: 2000ನೇ ಇಸವಿಯ ಹೊತ್ತಿಗೆ ಸಂಪೂರ್ಣ ಸಾಕ್ಷರತೆ ಮಾಡುವಂತಹ ಪ್ರಯತ್ನ ಸರ್ಕಾರ ಹಾಕಿಕೊಂಡಿದೆ. ಈಗಾಗಲೇ ಕನ್ನಡ ನಾಡು, ಸಾಕ್ಷರ ನಾಡು ಎನ್ನುವ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಕಡೆಯಿಂದಲೂ ಮಾಡುವಂತಹ ಪ್ರಯತ್ನ ಮಾಡಿದ್ದೇವೆ. ಈ ಕಾರ್ಯ ನಡೆಯುತ್ತಿದೆ. ಇದಕ್ಕೆ ಅತಿ ಹೆಚ್ಚು ಅಂದರೆ ಸುಮಾರು 660 ಲಕ್ಷ ರೂ.ಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಇದರಲ್ಲಿ ಸರ್ಕಾರ ಪಠ್ಯ-ಪುಸ್ತಕ 9 ರೂ. ಇದ್ದುದ್ದು, ಕೇವಲ ಒಂದು ರೂ. ಬೆಲೆಗೆ ಕೊಡುತ್ತಿದ್ದೇವೆ. ಸುಮಾರು 200 ಲಕ್ಷ ರೂ.ನಲ್ಲಿ ಈ ಕೆಲಸ ಮಾಡುತ್ತಿದ್ದೇವೆ. ಈ ಒಂದು ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ, ಜನಪ್ರತಿನಿಧಿಗಳು ಹೆಚ್ಚಿನ ಆಸಕ್ತಿ ವಹಿಸಿ ಸಹಕಾರ ಕೊಟ್ಟಿದ್ದೇ ಆದರೆ ನಾವು 2000ನೇ ಇಸವಿಯೊಳಗೆ ಸಂಪೂರ್ಣ ಸಾಕ್ಷರತೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಪಿ.ಯು.ಸಿ., ಡಿಗ್ರಿ, ಪಡೆದಿರುವ ಪ್ರೇರಕರಿಗೆ ಪ್ರೋತ್ಸಾಹಧನವನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ಅನುದಾನದಿಂದ ನಡೆಯುವಂಥದ್ದು, ರಾಜ್ಯ ಸರ್ಕಾರ ಸ್ವಲ್ಪ ಭರಿಸುತ್ತದೆ. ಇವರಿಗೆ ಪ್ರೋತ್ಸಾಹಧನ ಕೊಡಬೇಕೆಂದು ನನಗೆ ಆಸಕ್ತಿ ಇದೆ. ಆದರೆ ಅದು ಸಾಧ್ಯವಾಗುತ್ತಿಲ್ಲ, ಕೊಡುವುದಕ್ಕೆ ಸಾಧ್ಯವಾದರೆ ಮಾಡುತ್ತೇವೆ. ಅಲ್ಲಿ ಹಣ ಇಲ್ಲ. ಇರುವ ಹಣದಲ್ಲಿ ಆಸಕ್ತಿವಹಿಸಿ ಈ ಕೆಲಸವನ್ನು ನಾವು ನಿರ್ವಹಿಸುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎರಡು ಸಾವಿರ ಇಸವಿಯೊಳಗೆ ಸಂಪೂರ್ಣ ಸಾಕ್ಷರತೆಯನ್ನು ಮಾಡುತ್ತೇವೆಂದು ಹೇಳಿದರು. ಇಂದಿನವರೆಗೆ ಈ ವರ್ಷ ಎಷ್ಟು ಸಂಖ್ಯೆಯಲ್ಲಿ ಅನಕ್ಷರಸ್ಥರು ಇದ್ದಾರೆ? ಏಕೆಂದರೆ ತಾವು ತಮ್ಮ ಅಂಕಿಅಂಶಗಳಲ್ಲಿ 5.78 ಲಕ್ಷ ಮಹಿಳೆಯರಿಗೆ, 4.78 ಲಕ್ಷ ಪುರುಷರಿಗೆ ಸಾಕ್ಷರತೆಯನ್ನು ಕಲಿಸಲಾಗಿದೆ ಎಂದು ಹೇಳಿದ್ದೀರಿ. ಇದಕ್ಕಾಗಿ ನಾನು ತಮ್ಮನ್ನು ಕೇಳುತ್ತೇನೆ, ಎಷ್ಟು ತಮ್ಮ ಕಣ್ಣು ಮುಂದೆ ಈ ರೀತಿ ಅನಕ್ಷರಸ್ಥರು ಇದ್ದಾರೆ. ಅವರು ಸಹಿ ಹಾಕಿ ಬಿಟ್ಟರೆ ಅವನು ಸಾಕ್ಷರತನಾಗಿಬಿಟ್ಟ

ಎಂದು ಹೇಳುತ್ತೀರಿ, ಆತನನ್ನು ಮುಂದುವರಿಸಿಕೊಂಡು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸುವಂತಹ ಕೆಲಸವನ್ನು ತಾವು ಮಾಡುತ್ತೀರಾ? ಈ ಸಾಕ್ಷರತೆ ಕಲಿಸುವ ಪ್ರೇರಕರಿಗೆ ದುಡ್ಡು ಕೊಡುವುದಿಲ್ಲವೆಂದು ಹೇಳುತ್ತೀರಿ, ಬೇರೆ ರಾಜ್ಯಗಳಲ್ಲಿ ಈ ರೀತಿ ಪ್ರೇರಕರಿಗೆ ದುಡ್ಡು ಕೊಡುವುದಿಲ್ಲವೆ? ಕೇಂದ್ರ ಸರ್ಕಾರ ಏನಾದರೂ ಐವತ್ತು ಪರ್ಸೆಂಟ್ ಹಣ ಕೊಟ್ಟರೆ ತಾವು ಐವತ್ತು ಪರ್ಸೆಂಟ್ ಹಣ ಹಾಕಿ ಈ ಪ್ರೇರಕರಿಗೆ ಪ್ರೋತ್ಸಾಹಧನ ಕೊಡುವುದಕ್ಕೆ ತಾವು ಏನಾದರೂ ಸಿದ್ಧರಿದ್ದೀರ?

ಶ್ರೀ ಆರ್.ಕೃಷ್ಣಪ್ಪ: ಮುಂದಿನ ವರ್ಷದಿಂದ ಕಂಟಿನ್ಯೂ ಎಜ್ಯುಕೇಷನ್ ಸ್ಕೀಮ್ ಪೂರ್ತಿಯಾಗಿ ಸ್ಯಾಂಕ್ಷನ್ ಆಗಿದೆ. ಸುಮಾರು ಹದಿನೇಳು ಸಾವಿರ ಶಾಖೆಗಳನ್ನು ತೆರೆದು, ಪ್ರತಿಯೊಬ್ಬ ಪ್ರೇರಕನಿಗೆ ಮುನ್ನೂರು ರೂ.ಗಳನ್ನು ಕೊಡುವಂತಹ ವ್ಯವಸ್ಥೆ ಮಾಡುವುದಕ್ಕೆ ಈಗಾಗಲೇ ಅಂಕಿತ ದೊರೆತಿದೆ. ಇದು ಮುಂದಿನ ವರ್ಷದಿಂದ ಪ್ರಾರಂಭವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಪ್ರಕಟಿಸಿರುವ ಕೆಲವು ಪುಸ್ತಕಗಳು ಗೋದಾಮ್‌ಗಳಲ್ಲಿ ಹಾಗೆ ಬಿದ್ದಿವೆ. ಹೋದ ವರ್ಷ ಎಷ್ಟು ಮಾಡಿಸಿದಿರಿ, ವಿತರಣೆಯಾಯಿತೆ? ಗೋದಾಮ್‌ಗಳಲ್ಲಿ ಎಷ್ಟು ಕೊಳೆಯುತ್ತಿದೆ, ಇದಕ್ಕೇನಾದರೂ ಲೆಕ್ಕ ಇದೆಯೇ?

ಶ್ರೀ ಆರ್.ಕೃಷ್ಣಪ್ಪ: ನಂತರ ವಿವರಗಳನ್ನು ತರಿಸಿಕೊಡುತ್ತೇನೆ.

ವಿಷಯ: ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಪಂಚಾಯಿತಿಗಳನ್ನು ಪಂಚಾಯಿತಿ ಕಾಯಿದೆ ವ್ಯಾಪ್ತಿಯಿಂದ ಬಿಡುಗಡೆ ಮಾಡುವ ಬಗ್ಗೆ.

221 (1604)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಎರಡು ತಾಲ್ಲೂಕುಗಳಾಗಿರುವುದು ನಿಜವೇ? ಹಾಗಿದ್ದಲ್ಲಿ ಈ ಎರಡು ತಾಲ್ಲೂಕುಗಳಿಗೂ ಒಂದೇ ತಾಲ್ಲೂಕು ಪಂಚಾಯತಿ ಇದ್ದು, ಇದಕ್ಕೆ ಪ್ರತ್ಯೇಕ ತಾಲ್ಲೂಕು ಪಂಚಾಯತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಬೆಂಗಳೂರು ನಗರಕ್ಕೆ ಮತ್ತು ನಗರಸಭೆಗಳಿಗೆ ಹೊಂದಿಕೊಂಡಿರುವ ಕೆಲವು ಪಂಚಾಯತಿಗಳನ್ನು ಪಂಚಾಯತಿ ಕಾಯಿದೆ ವ್ಯಾಪ್ತಿಯಿಂದ ಬಿಡುಗಡೆ ಮಾಡುವ ನಿರ್ಧಾರ ಸರ್ಕಾರದ ಮುಂದೆ ಇದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್